ಹರಿದಾಡುವ ಜೀವಂತ ಹಲ್ಲಿಗಳನ್ನು ಕಂಡು, 'ಯೆಂತ ರಾಜಾ? ಊಟ ಆಯ್ತಾ? ಇಷ್ಟು ತಡ ಮಾಡಿ ಬಂದ್ರೆ ಹೇಗೆ? ನಾಳೆಯಿಂದ ಬೇಗ ಬರ್ಬೇಕು ಆಯ್ತಾ?' ಅಂತಲೋ, 'ಇಷ್ಟು ಬೇಗ ಯೆಂತಕ್ಕೆ ಬಂದೆ? ಹಾಗೆಲ್ಲ ಹೊತ್ತುಗೊತ್ತು ಇಲ್ಲದೆ ಬರಬಾರದು ಅಂತ ಗೊತ್ತಿಲ್ವಾ?' ಅಂತಲೋ 'ಪ್ರಾಣಸಖಾ ನೀನು ಇಲ್ಲದೆ ಬಾಳೇ ಬರಿದು. ಹೋಗೋಣವೇ ಅಮರಾವತಿಯ ಕಡೆಗೆ' ಅಂತ ಆಟದ ಡೈಲಾಗು ಹೇಳುತ್ತಲೋ ಇರ್ತಿದ್ಲು. ಹೆಂಡತಿಯ ಮಂಡೆ ಪೂರ ಬಿಂಗ್ರಿ ಆಗಿದೆ ಅಂತ ಎಣಿಸಿದ. ಆ ಬಗ್ಗೆ ಅವಳ ಹತ್ರ ಮಾತಾಡಿದ್ರೆ ತನ್ನ ರುಂಡ ಚೆಂಡಾಡ್ತಾಳೆ ಅಂತ ಹೆದರಿ ಸುಮ್ಮನಾದ. ಇನ್ನೂ ಒಂದು ವಿಷಯ ಅವನ ಮಂಡೆ ಹಾಳು ಮಾಡಿದ್ದು ಯೆಂತದು ಅಂದ್ರೆ, ಹಿಂದೆಲ್ಲ ತಾನು ಮೇಳಕ್ಕೆ ತಿರುಗಾಟಕ್ಕೆ ಹೋಗುವಾಗ ಚಪ್ಪೆ ಮುಖ ಹಾಕ್ತಿದ್ದ ಅವಳು ಈಗ ನೆಗ್ಯಾಡ್ತಾ ಕಳಿಸಿಕೊಡ್ತಾಳೆ! ಯಾವಾಗ ಬರ್ತೀರಿ ಅಂತ ಸಾ ಕೇಳುದಿಲ್ಲ! ಇದಕ್ಕೆಲ್ಲ ಯೆಂತ ಕಾರಣ ಇರಬಹುದು? ಅಂತೆಲ್ಲ ಎಣಿಸಿ ಮಂಡೆ ಹಾಳು ಮಾಡಿಕೊಂಡ. ಆ ತಿರುಗಾಟದಲ್ಲಿ ಅವನ ಪಾರ್ಟು ಡಲ್ ಆಗ್ಲಿಕ್ಕೆ ಸುರುವಾಯಿತು. ಒಂದು ಸರ್ತಿ ಅಂತೂ ರಾಮನ ಪಾರ್ಟಿಗೆ ಮುಖವರ್ಣಿಕೆ ಬರೀತಾ ರಾವಣನ ಪಾತ್ರದ್ದು ಬರ್ದು ಬಿಟ್ಟಿದ್ದ! ಮೇಳದ ಹಿರಿಯ ವೇಷಧಾರಿ ವೆಂಕಟರಾಯರು, 'ಮಾಧವಾ ನಿನ್ನ ವೇಷ ಯಾವುದಾ ? ರಾಮನದ್ದಾ? ರಾವಣನದ್ದಾ?' ಅಂತ ಕೇಳಿದಾಗಲೇ ಅವನಿಗೆ ಎಚ್ಚರಿಕೆ ಆದದ್ದು. 'ರಾಯರೇ ನಾನು ಸೋತೆ' ಅಂತ ಹೇಳಿ ಅವರ ಭುಜದಲ್ಲಿ ತಲೆ ಇಟ್ಟು ದಿಣ್ಣ(ತುಂಬ) ಕೂಗಿದ(ಅತ್ತ). ರಾಯರು 'ಯಾಕೆ ಮಾಧವಾ? ಯೆಂತ ಆಯ್ತು?' ಅಂತ ಕೇಳಿದ್ರು. ಅವ ತನ್ನ ಹೆಂಡತಿಯ ಎಲ್ಲ ಬಿಂಗ್ರಿ ವ್ಯವಹಾರದ ಬಗ್ಗೆ ಹೇಳಿದ. ಎಲ್ಲ ಕೇಳಿದ ಅವರು ದೊಡ್ಡದೊಂದು ಸ್ವಾಸ ಬಿಟ್ರು. 'ನಿನ್ನ ಹೆಂಡತಿ ಕೇರಳ ದೇಶದವಳಾ?' ಅಂತ ಕೇಳಿದ್ರು. ಅವ ಹೌದು ಅಂತ ತಲೆ ಆಡಿಸಿದ. ಹಾಗಿದ್ರೆ ಹೀಗೆ ಆಗಿರ್ತದೆ ನೋಡು' ಅಂತ ಹೇಳಿದವರೆ ಆಚೆ ಈಚೆ ನೋಡಿ ಮೆಲ್ಲ ಅವನ ಕಿವಿಯಲ್ಲಿ ರಹಸ್ಯ ಹೇಳಿದ್ರು. ಅದು ಕೇಳಿ ಅವ ದಂಗು ಬಡಿದು ಹೋದ. 'ಹೌದಾ ರಾಯರೇ ಹೀಗೆಲ್ಲ ಆಗ್ತದಾ!? ನಾನು ಇದನ್ನು ನಂಬಬಹುದಾ'? ಅಂತ ಕೇಳಿದ. 'ಬೇಕಿದ್ರೆ ಇವತ್ತೇ ಮೊದಲ ಪ್ರಸಂಗ ಮುಗ್ದ ಕೂಡ್ಲೇ ನೀನು ಮನೆಗೆ ಹೋಗಿ ನೋಡು. ನಿಂಗೇ ಸತ್ಯ ಯೆಂಥದೂ ಅಂತ ಗೊತ್ತಾಗ್ತದೆ' ಅಂದ್ರು. ಆವತ್ತಿನ ಆಟದ ಜಾಗಕ್ಕೂ ಅವನ ಮನೆಗೂ ಒಂದು ಗಂಟೆ ದಾರಿ. ಮೊದಲ ಪ್ರಸಂಗ ಮುಗ್ದ ಕೂಡ್ಲೇ ಅವಸರ ಅವಸರವಾಗಿ ಸಿಕ್ಕಿದ ಲೋರಿ ಹತ್ತಿಕೊಂಡು ಸೇಂಕ್ತಾ ಸೇಂಕ್ತಾ(ಏದುಸಿರು ಬಿಡುತ್ತಾ) ಮನೆಯ ಕಡೆಗೆ ಹೋದ. ಅಷ್ಟು ದೂರಕ್ಕೇ ಹೆಂಡತಿಯ ನಗು ಅಟ್ಟಹಾಸ ಕೇಳ್ತಾ ಉಂಟು. ಶಬ್ದ ಮಾಡದೇ ಮನೆ ಹಿಂದೆ ಹೋಗಿ ಮೆಲ್ಲ ಕಿಟಕಿಯ ಸಂದಿಯಿಂದ ನೋಡಿದ. ಹೆಂಡತಿಯೊಟ್ಟಿಗೆ ಮೂರು ಮಂದಿ ಹೆಂಗಸರು ಹಾಗೂ ಮೂರು ನಾಕು ಮಂದಿ ಗಂಡಸರು. ಅವರಲ್ಲಿ ಕಿಶೋರ, ರಾಮ ಭಾಗವತ, ಮೇಳದ ಆಟ ಎಲ್ಲೇ ಆದ್ರೂ ನೋಡ್ಲಿಕ್ಕೆ ಬಂದು ದಿವ್ಯಳನ್ನೇ ತಿನ್ನುವ ಹಾಗೆ ನೋಡ್ತಿದ್ದ ವಸಂತ ಶೆಟ್ರು ಹೀಗೆ ಎಲ್ಲರೂ! ಅವರೆಲ್ಲ ರತಿ ಸುಖದ ತುತ್ತ ತುದಿಯಲ್ಲಿ ಇದ್ದಾರೆ. ಈಚೆಯ ಖಬರೇ ಇಲ್ಲ.

'ದಿವ್ಯಾ ನಮಿಗೆ ಬೇಕಾದ ಗಂಡಸರನ್ನು ಹಲ್ಲಿ ಮಾಡಿ ಇಟ್ಟುಕೊಂಡು ಬೇಕಾದ ಸಂದರ್ಭದಲ್ಲಿ ಹೇಗೆ ಮನುಷ್ಯರನ್ನಾಗಿ ಮಾಡಿ ಬಳಸಿಕೊಳ್ಳುದನ್ನು ಕಲಿಸಿ ಕೊಟ್ಟಿಯಲ್ವಾ? ತುಂಬ ಥ್ಯಾಂಕ್ಸ್ ಮಾರಾಯ್ತಿ ನಿಂಗೆ' ಅಂತ ಒಬ್ಳು ಅಂದ್ಳು. 'ಹೌದೌದು ಗಂಡಸರ ಸೊಕ್ಕು ಮುರೀಬೇಕೂಂತಾದ್ರೆ ನಾವು ಸಾ ಇಂಥದ್ದೇ ಮಾಡ್ಬೇಕು' ಮತ್ತೊಬ್ಬಳು ಹೇಳಿದ್ಲು. 'ಪಾಪ ನಮ್ಮ ಮನೇದ್ದು ಗೋಡೆಯಲ್ಲಿ ಇರೂದೆಲ್ಲ ಹಲ್ಲಿ ಅಂತಲೇ ತಿಳ್ಕೊಂಡಿದೆ' ಅಂತ ಹೇಳಿ ದಿವ್ಯ ಬಿದ್ದು ಬಿದ್ದು ನಕ್ಕಳು.